Sri VATAL NAGARAJ.—No.

Mr. SPEAKER.—I direct the hon. Member Sri Vatal Nagaraj to withdraw from the House and not participate in the proceedings of the House for the the day.

ಶ್ರೀ ವಾಟಾಳ್ ನಾಗರಾಜ್.—ನಾನು ಹೋಗುವುದಿಲ್ಲ. ತಾವು ಏನು ಬೇಕಾದರೂ ಮಾಡಿಕೊಳ್ಳಬಹುದು.

Mr. SPEAKER.—I name the member for suspension from the service of the House.

Motion to suspend the Services of Sri Vatal Nagaraj from the Session

Sri K. PUTTASWAMY.—I move :

"That the Hon. Member Sri Vatal Nagaraj be suspended from the service of the House for the rest of the current session."

(*Several members stood up*)

Mr. SPEAKER.—Unless he withdraws, I shall put the motion to the vote of the House.

(*Sri Vatal Nagaraj did not withdraw*)

Sri S. GOPALA GOWDA.—I rise to a point of order. ಕ್ರಿಯಾಲೋಪ ಏನೆಂದರೆ ಈ ವಿಷಯ ಅಜೆಂಡಾದಲ್ಲಿ ಇದೆಯೇ, ಎಂದು ನಾನು ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ..... ..

Mr. SPEAKER.—I have directed the hon. Member to withdraw. He has refused to withdraw. Then I had to name him. Even now if he withdraws the Hon. Minister may not press his motion. Sri Gopala Gowda may ask him whether he is going to withdraw or not.

ಶ್ರೀ ಎಸ್. ಗೋಪಾಲಗೌಡ.—ನಾನು ತಮ್ಮ ಪರವಾಗಿ ನಾನು ವಾಟಾಳ್ ನಾಗರಾಜರ ವರನ್ನು ಕೇಳುತ್ತೇನೆ. ತಾವು ಹೊರಗೆ ಹೋಗಬೇಕು ಎಂದರೆ ಹೋಗುತ್ತೇವೆ. ಈಗ ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ.....

Mr. SPEAKER.—I do not want permit him to speak. Even now if he withdraws I think the Hon. Minister may not press his motion.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ನಾನು ಭಾಷಣ ಮಾಡುವುದಿಲ್ಲ. ಮಾನ್ಯ ಮಂತ್ರಿಗಳು ತಮ್ಮ ಒಂದು ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಮಾತನಾಡುವುದಕ್ಕೆ ಎರಡು ನಿಮಿಷ ಅವಕಾಶ ಕೊಡಿ.

Mr. SPEAKER.—I am sorry I cannot agree to it. I have made it quite clear. If the Hon. Member gives notice under proper rule I shall certainly consider it. At this stage I cannot permit him to make a statement.

(*Sri Vatal Nagaraj did not withdraw*)

Mr. SPEAKER.—The question is :

"That the hon. Member Sri Vatal Nagaraj be suspended from the service of the House for the rest of the current session."

The motion was adopted.

(*Several members stood up*)

Mr. SPEAKER.—I adjourn the House for 15 minutes.

The House rose at Fifty Minutes past Two of the Clock and reassembled at Ten Minutes past Three of the Clock.

[MR. DEPUTY SPEAKER in the Chair]

Calling Attention to matters of urgent Public Importance :

re : Setting Fire to Ragi Heaps and other Farm Produce in Kunigal Taluk

Sri G. T. GOVINDA REDDY (Madhugiri).—Sir, I call the attention of the Hon. Chief Minister to setting fire to ragi heaps and other farm produce belonging to families of Kuthurahally village, Kasaba Hobli, Kunigal Taluk.

† Sri VEERENDRA PATIL (Chief Minister).—On 6th December 1969, Sri Venkata Revanaiah, V. P. Chairman, Sri Hombale Thimmiah and Sri Nadakeraiah of Kutharahally complained to the Kunigal Police about burning of ragi haystack on 5th December 1969 by one Balegowda and others causing damage to the tune of Rs. 11,000. Four cases were registered under section 435 I.P.C. against 8 persons including Sri Balegowda. They were arrested and produced before the First Class Magistrate, Tumkur on 7th December 1969 for being remanded to judicial custody. As 7th December 1969 was a Sunday, the Magistrate returned the accused with a direction to enlarge them on bail as offence under section 435 I.P.C. was bailable. They were therefore enlarged on bail.

On 29th December 1969, the V. P. Chairman again presented a complaint that in the midnight Sri Rangaiah and Sri Thimmarayappa, set fire to his ragi haystack causing loss of about Rs. 800. A case was registered under section 435 I. P. C. and the accused arrested and remanded to judicial custody. However, the Court enlarged them on bail the same day. All the five cases have been charge-sheeted and taken on file in the Court of the First Class Magistrate, Tumkur.

On 13th January 1970 and 20th January 1970 again the V. P. Chairman and Sri Javaraiah complained to Police regarding another fire incident.

(SRI VEERENDRA PATIL)

In view of these complaints action has been take under section 107 Cr. P. C. also against all the accused. Men have been posted in the village regularly, The Circle Inspector and Police Sub-Inspector are frequently visiting the village and making night halts. The Superintendent of Police also visited the village on 5th January 1970. The parties in the village have been suitably warned and the Police are taking all precautionary measures to ensure peace.

†ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯಾರುದುರ್ಗ).—ಸ್ವಾಮಿ, ಕುದೇರಹಳ್ಳಿ ಗ್ರಾಮದಲ್ಲಿ ಪೋಲೀಸ್ ಪಟೇಲರು ಒಂದು ರಿಪೋರ್ಟ್ ಕಳುಹಿಸಿದ್ದಾರೆ. ಆ ರಿಪೋರ್ಟಿನಲ್ಲಿ ಯಾರ ಯಾರ ಮೇಲೆ ಅನುಮಾನ ಇದೆಯೋ ಅಂಥವರ ಹೆಸರನ್ನು ಸೇರಿಸಿದ್ದಾರೆ. ಆದರೂ ಕೂಡ ಯಾರ ಮೇಲೆ ಅನುಮಾನ ಇದೆಯೋ ಅಂಥವರನ್ನು ವಿಚಾರಣೆ ಮಾಡುವುದಕ್ಕೆ ಅವಕಾಶವಾಗಿಲ್ಲ.

ಎರಡನೆಯದು ಅಲ್ಲಿ ಆಧಿಕಾರಿಗಳು ಯಾರು ತಪ್ಪಿತಸ್ಥರು ಇದ್ದಾರೆಯೋ ಅವರನ್ನು ತನಿಖೆ ಮಾಡಿ ಹೆಚ್ಚು ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಅಲ್ಲಿರತಕ್ಕ ಸಬ್ ಇನ್‌ಸ್ಪೆಕ್ಟರು, ಇನ್‌ಸ್ಪೆಕ್ಟರು, ಮತ್ತು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿನ್‌ಡೆಂಟೆಂಟರು ಅಲ್ಲಿ ಸ್ಥಳಕ್ಕೆ ಹೋಗಿ ಅಜಮಾಯಿಷಿ ಮಾಡಿ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವನ್ನು ಕೊಡದೆ ನಮ್ಮ ತಾಲ್ಲೂಕಿನಿಂದ ಬಂದಿರತಕ್ಕ ಉಪ ಮಂತ್ರಿಗಳು ಪೋಲೀಸಿನವರ ಕೆಲಸಕಾರ್ಯಗಳಲ್ಲಿ ಕೈ ಹಾಕಿ ಅಲ್ಲಿರತಕ್ಕ ಅಲ್ಪಸಂಖ್ಯಾತರ ಊರಿನಲ್ಲಿ ಭಯವನ್ನುಂಟುಮಾಡಿ ನಿರಪರಾಧಿಗಳ ಮೇಲೆ ಕ್ರಮತೆಗೆದುಕೊಳ್ಳಬೇಕೆಂದು ಪೋಲೀಸಿನವರನ್ನು ಒತ್ತಾಯ ಮಾಡುತ್ತಿದ್ದಾರೆ. ಅನೇಕ ಸಾವಿರ ರೂಪಾಯಿಗಳ ಮಾಲು ಸುಟ್ಟು ಹೋಗಿದೆ. ಅಪರಾಧಿಗಳು ಯಾರು ಎಂಬುದನ್ನು ಕಂಡುಹಿಡಿಯುವುದಕ್ಕೆ ಅವಕಾಶವಾಗಿಲ್ಲ. ಇದನ್ನೆಲ್ಲಾ ಮಾನ್ಯ ಮುಖ್ಯಮಂತ್ರಿಗಳು ಪೂರ್ಣವಾಗಿ ವಿಚಾರಣೆ ಮಾಡಬೇಕು. ಆ ಸ್ಥಳದಲ್ಲಿ ನಿರಪರಾಧಿಗಳಾಗಿರುವವರು ಒಂದು ಮನವಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಮನವಿಯ ಮೇಲೆ ಸಿ. ಐ. ಡಿಗಳನ್ನು ಕಳುಹಿಸಿ ತನಿಖೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಅವರ ಕ್ಷೇತ್ರದ ಊರಿನಲ್ಲಿರುವವರು ತಮಗೆ ವಿರುದ್ಧವಾಗಿ ಪೋಟು ಕೊಟ್ಟರು ಎಂದು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಉಪಮಂತ್ರಿಗಳು ಪೋಲೀಸಿನವರನ್ನು ಒತ್ತಾಯ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಿ ನ್ಯಾಯವನ್ನು ದೊರಕಿಸಿಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಮೂಲಕ ಸೂಚನೆ ಮಾಡುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ.—ಪೋಲೀಸ್ ಪಟೇಲರು ರಾಜಕೀಯ ಮಾಡಿ ಅಲ್ಲಿಯ ಕೆಲವು ನಿರಪರಾಧಿಗಳ ಹೆಸರನ್ನು ಬರೆದು ಅವರಿಗೆ ಶಿಕ್ಷೆಯನ್ನು ವಿಧಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಪೋಲೀಸ್ ಪಾಟೀಲರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೀರಾ ? ಅಲ್ಲ ನಿರಪರಾಧಿ ಜನಗಳಿಗೆ ಒಂದು ರಕ್ಷಣೆ ಕೊಡುವ ವ್ಯವಸ್ಥೆ ಮಾಡುತ್ತೀರಾ ?

MR. DEPUTY SPEAKER.—The House will adjourn for 10 Minutes as there is electricity failure.

The House rose at Twenty Minutes past Three of the Clock and reassembled at Forty Minustes past Three of the Clock.

[MR. DEPUTY SPEAKER in the Chair]

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ಶ್ರೀಮಾನ್ ಬಿ. ಎನ್. ರಾಮೇಗೌಡ. ಶ್ರೀಮಾನ್ ಗೋವಿಂದ ರೆಡ್ಡಿ, ಶ್ರೀಮಾನ್ ಗರಗಣ್ಣ, ಶ್ರೀಮಾನ್ ಹುಚ್ಚಮಾಸ್ತಿ ಗೌಡರು, ಶ್ರೀಮಾನ್ ಎಂ. ಎನ್. ರಾಮಣ್ಣ ಮತ್ತು ಶ್ರೀಮಾನ್ ಚಿಕ್ಕೇಗೌಡರು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದಾರೆ. ನಾನು ಸ್ಟೇಟ್‌ಮೆಂಟ್ ಮಾಡಿದೆ. ಅದರ ಮೇಲೆ ಪ್ರಶ್ನೆಗಳನ್ನು ಹಾಕಿದ್ದಾರೆ. ಕಾಲ್ ಅಟೆನ್‌ಷನ್ ಸ್ಟೇಟ್‌ಮೆಂಟಿನಲ್ಲಿ ನಾನು ಕ್ಲೀಯರ್ ಆಗಿ ಹೇಳಿದ್ದೇನೆ. ಆ ಐದು ಕೇಸುಗಳಿಗೆ ಚಾರ್ಜ್‌ಶೀಟ್ ಆಗಿ ಅವು ಕೋರ್ಟಿನ ಮುಂದೆ ಇವೆ. ಅವು ಸಬ್ ಜುಡಿಸ್ ಆದುದರಿಂದ ಅವು